ದಿನಾಂಕಃ 02.01.2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಸಿದ್ದು, ಅವು ಸತ್ಯ ವಾಗಿರುತ್ತವೆ. ಪ್ರತಿವಾದಿ 1 ರಿಂದ 3 ರವರು ವಾದಿಗೆ ಬರೆದುಕೊಟ್ಟಿರುವ ಕ್ರಯದ ಕರಾರು ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ ಸದರಿ ಪತ್ರವನ್ನು ಮತ್ತು ನನ್ನ ಸಹಿಯನ್ನು ಈಗಾಗಲೇ ನಿಪಿ 3 ಮತ್ತು ನಿಪಿ 3(ಇ) ಎಂದು ಗುರುತಿಸಲಾಗಿದೆ. ನಿಪಿ 3 ಕ್ಕೆ ವಾದಿ ಮತ್ತು ಪ್ರತಿವಾದಿಗಳು ಸಹಿ ಹಾಕಿದ್ದು, ಸದರಿಯವರ ಕೊನೆಯ ಪುಟದಲ್ಲಿರುವ ಸಹಿಗಳನ್ನು ನಿಪಿ 3(ಎ) ಯಿಂದ (ಡಿ) ಎಂದು ಗುರುತಿಸಲಾಗಿದೆ. ಸಾಕ್ಷಿಯು ನಿಪಿ 3 ರಲ್ಲಿರುವ ಫೋಟೋ ಮತ್ತು ಅದರ ಪಕ್ಕದಲ್ಲಿರುವ ಸಹಿಗಳನ್ನು ಗುರುತಿಸಿರುತ್ತಾರೆ.

ನನ್ನೊಂದಿಗೆ ವೆಂಕಟೇಶ್ ರವರು ಸಾಕ್ಷಿಯಾಗಿ ಸಹಿ ಮಾಡಿದ್ದು ಸದರಿಯವರ ಸಹಿಯನ್ನು ಈಗಾಗಲೇ ನಿಪಿ 3(ಎಫ್) ಎಂದು ಗುರುತಿಸಲಾಗಿದೆ. ನಿಪಿ 3 ನ್ನು ಜಗದೀಶ್ ರವರು ಬರೆದಿದ್ದು, ಸದರಿಯವರ ಸಹಿಯನ್ನು ಈಗಾಗಲೇ ನಿಪಿ 3(ಜಿ) ಎಂದು ಗುರುತಿಸಲಾಗಿದೆ. ನಿಪಿ 3 ಕ್ಕೆ ಸಂಬಂಧಿಸಿದ ಪೂರಕ ಪತ್ರವನ್ನು ಈಗಾಗಲೇ ನಿಪಿ 4 ಎಂದು ಗುರುತಿಸಲಾಗಿದ್ದು ವಾದಿ ಮತ್ತು ಪ್ರತಿವಾದಿಗಳ ಸಹಿಗಳನ್ನು ನಿಪಿ 4(ಎ) ಯಿಂದ (ಡಿ) ಎಂದು ಗುರುತಿಸಲಾಗಿದೆ. ನಿಪಿ 4 ಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದು ನನ್ನ ಸಹಿಯನ್ನು ಈಗಾಗಲೇ ನಿಪಿ 4(ಎಫ್) ಎಂದು ಗುರುತಿಸಲಾಗಿದೆ. ನನ್ನೊಂದಿಗೆ ನಿಪಿ 4 ಕ್ಕೆ ನಟರಾಜ್ ರವರು ಸಹಿ ಹಹಾಕಿದ್ದು ಅವರ ಸಹಿಯನ್ನು ಈಗಾಗಲೇ ನಿಪಿ 4(ಜಿ) ಎಂದು ಗುರುತಿಸಲಾಗಿದೆ. ನಿಪಿ 4 ನ್ನು ಜಗದೀಶ್ ರವರು ಬರೆದಿದ್ದು ಸದರಿಯವರ ಸಹಿಯನ್ನು ಈಗಾಗಲೇ ನಿಪಿ 4(ಹೆಚ್) ಎಂದು ಗುರುತಿಸಲಾಗಿದೆ. ಸಾಕ್ಷಿಯು ನಿಪಿ 4 ರಲ್ಲಿರುವ ಪಕ್ಷಗಾರರ ಫೋಟೋಗಳು ಮತ್ತು ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಪಾಟೀ ಸವಾಲಿಗೆ ವಕೀಲರು ಸಮಯಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.